ಅ) ಅವಶ್ಯಕವಾದ ಈ ರಸ್ತೆಯ ಕೆಲಸ ಪ್ರಾರಂಭವಾಗುವಲ್ಲಿ ಈ ರೀತಿಯ ವಿಳಂಬಕ್ಕೆ ಕಾರಣ ಗಳೇನು,

ಇ) ಸದರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಕೆಲಸಕ್ಕೆ ಬೇಕಾದ ಭೂಮಿ ಲಭ್ಯವಾಗದೆ ಇದ್ದುದರಿಂದ ಕೆಲಸವನ್ನು ಪ್ರಾರಂಭಿಸಲಾಗಲಿಲ್ಲ.

ಆ) ಮಂಜೂರಾದ ಅಂದಾಜಿನಂತೆ ಸೂಚಿಸಿದ ಭೂಮಿ ದೊರಕದಿದ್ದ ಕಾರಣ ಬದಲಿ ಮಾರ್ಗ ದಲ್ಲಿ ರಸ್ತೆಯ ನಿರ್ಮಾಣಕ್ಕೆ ೨೧ ಲಕ್ಷಗಳು ಮರು ಅಂದಾಜು ಮಾಡಲಾಗಿದೆ.

ಇ) ರಸ್ತೆಯ ಕೆಲಸವನ್ನು ಪೂರ್ಣಗೊಳಿಸಿದ ಮಾರ್ಗದಲ್ಲಿ ತೆಗೆದುಕೊಳ್ಳುವುದನ್ನು ಹಣದ ಲಭ್ಯತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು.

ಸಂಳ್ಳ ಹಾಗೂ ಪುತ್ತೂರು ತಾಲ್ಲೂಕುಗಳಲ್ಲಿ ರಸ್ತೆ ಸೇತುವೆಗಳ ನಿರ್ಮಾಣದ ಬಗ್ಗೆ

೫೧೯. ಶ್ರೀ ಕೆ. ಕುಶಾಲ, (ಸುಳ್ಯ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸು ವರೇ ?

ಅ) ಸುಳ್ಳ ಹಾಗೂ ಪುತ್ತೂರು ತಾಲ್ಲೂಕುಗಳಲ್ಲಿ ೧೯೮೫-೮೬ನೇ ಸಾಲಿನಲ್ಲಿ ಬಾಕಿ ಉಳಿದ ರಸ್ತೆ, ಸೇತುವೆ, ರಸ್ತೆ ಟಾರು ನಿರ್ಮಾಣದ ಕಾಮಗಾರಿಗಳಿಗೆ ಹಾಗೂ ಹೊಸ ಕಾಮಗಾರಿಗಳಿಗೆ ಆಯವ್ಯಯದ ಮಂಜೂರಾತಿ ನೀಡಿದ್ದು ಸರ್ಕಾರದಿಂದ ಹಣ ಬಿಡುಗಡೆಯಾಗದೆ ಮತ್ತು ಕಾಮಗಾರಿಗಳ ಬಗ್ಗೆ ಟೆಂಡರ್ ಕರೆಯದೆ ಉಳಿದಿರುವುದಕ್ಕೆ ಕಾರಣಗಳೇನು ?

ಆ) ಹೀಗೆ ಉಳಿದ ಕಾಮಗಾರಿಗಳನ್ನು ಕೈಬಿಟ್ಟಲ್ಲಿ ಕ್ಷೇತ್ರಕ್ಕೆ ಅನ್ಯಾಯವಾಗುವುದರಿಂದ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಪುತ್ತೂರು ಮತ್ತು ಸುಳ್ಳ ತಾಲ್ಲೂಕುಗಳಲ್ಲಿ ಮಂಜೂರಾತಿಯಾದ ಎಲ್ಲಾ ಕೆಲಸಗಳನ್ನು ತೆಗೆದುಕೊಂಡಿದೆ. ೧೯೮೫-೮೬ರ ವಾರ್ಷಿಕ ಯೋಜನೆಯಲ್ಲಿ ಸಂಪರ್ಕಗಳಿಗೆ ಒದಗಿಸಿದ ಹಣ ಕಡಿತ ವಾದ್ದರಿಂದ (ಅಂತಿಮ ಆಯವ್ಯಯದಲ್ಲಿ) ಡಾಂಬರ್ ಹಾಕುವಿಕೆ ಹಾಗೂ ಇತರೇ ರಸ್ತೆ ನಿರ್ಮಾಣಗಳ ಶೀರ್ಷಿಕೆಯಲ್ಲಿ ಬರುವ ಕೆಲಸಗಳು ನಿಧಾನವಾಗಿದೆ.

ಆ) ಮಂಜೂರಾದ ಕೆಲಸಗಳನ್ನು ಹಣದ ಲಭ್ಯತೆಯನ್ನು ಅನುಸರಿಸಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು.

ಸಿರಾ, ಬಾಣಾವಾರ ರಸ್ತೆಯ ದುರಸ್ತಿ ಬಗ್ಗೆ

೫೧೬. ಶ್ರೀ ಪಿ ಬಿ. ಓಂಕಾರ ಮೂರ್ತಿ (ಕಡೂರು).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿರಾ ಬಾಣಾವಾರ ರಸ್ತೆಯು ರಾಜ್ಯ ಹೆದ್ದಾರಿಯಾಗಿದ್ದು ೭-೮ ವರ್ಷದಿಂದ ದುರಸ್ತಿ ಇಲ್ಲದೆ ತುಂಬಾ ಶಿಥಿಲವಾಗಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಈ ರಸ್ತೆಯ ದುರಸ್ತಿ ಕೆಲಸ ಕೈಗೆತ್ತಿಕೊಂಡು ಪೂರ್ತಿಗೊಳಿಸಲಾಗುವುದೆ.